ವಿಷಯ:ಭಟ್ಕಳ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ಪೂರೈಕೆ ಸುಧಾರಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:160(654)

ಶ್ರೀಡಾ.ಯು. ಚಿತ್ತರಂಜನ(ಭಟ್ಕಳ) ಮಾನ್ಯ ಉಪಮುಖ್ಯಮಂತ್ರಿಗಳು,

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಉತ್ತರ ಕನ್ನಡದಲ್ಲಿ ಭಟ್ಕಳ ಹಾಗೂ ಹೊನ್ನಾವರ ಭಾಗದಲ್ಲಿ ವೊಲ್ಟೇಜ ತೊಂದರೆಯಿಂದ ವಿದ್ಯುತ್ ಅಸಮರ್ಪಕವಾಗಿ ಸರಬರಾಜು ಆಗುತ್ತಿರುವುದು ಸರ್ಕಾದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ನಿವಾರಿಸಲು ಕುಮಟಾದಿಂದ ಭಟ್ಕಳಕ್ಕೆ 110 ಕೆ.ವಿ. ವಿದ್ಯುತ್ ಲೈನ್ ಹಾಕುವುದರ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರ. ಜೆ.ಹೆಚ್. ಪಟೇಲ್

ಅ) ಹೌದು.

ಆ) ಕುಮಟಾದಿಂದ ಮುರುಡೇಶ್ವರದವೆಗಿನ 100 ಕೆ.ವಿ. ವಿದ್ಯುತ್ ಲೈನನ್ನು ನಿರ್ಮಾಣ ಮಾಡಲು ತಾಂತ್ರಿಕ ಮತ್ತು ಆಡಳಿತ್ಮಾತಕ ಮಂಜೂರಾತಿಯನ್ನು ಆಗಾಗಲೇ ನೀಡಲಾಗಿದೆ. ಅರಣ್ಯ ಇಲಾಖೆಯಿಂದ ಮರ-ಗಿಡಗಳನ್ನು ಕುಡಿಯುವ ಬಗ್ಗೆ(ಫಾರೆಸ್ಟ್ ಕ್ಲಿಯರೆನ್ಸ್) ಒಪ್ಪಿಗೆ ದೊರೆತ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಮುರುಡೇಶ್ವರದಿಂದ ಬಟ್ಕಳದವರೆಗೆ 33ಕೆ.ವಿ. ವಿದ್ಯುತ್ ಲೈನನ್ನು ನಿರ್ಮಾಣ ಮಾಡುತ್ತಿದ್ದು ಭಟ್ಕಳದಲ್ಲಿ ಒಂದು 33-11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸಹ ನಿರ್ಮಾಣ ಮಾಡಲಾಗುತ್ತಿದೆ.

ವಿಷಯ:ಗ್ರಾಮಪಂಚಾಯತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:161(496)

ಮಾನ್ಯ, ಗ್ರಾಮಾಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು.

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) 1994ರ ನವೆಂಬರ್ ತಿಂಗಳಿನಿಂದ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಕೊಡಾಣಿ ಗ್ರಾಮ ಮಂಚಾಯ್ತಿಯ ಅಧ್ಯಕ್ಷರು ನಿಧನ ಹೊಂದಿದ ನಂತರ ಮತ್ತು ಉಪಾಧ್ಯಕ್ಷರು ರಾಜೀನಾಮೆ ನೀಡಿದ ನಂತರ ಬದಲಿ ವ್ಯವಸ್ಥೆ ಮಾಡದಿರಲು ಕಾರಣಗಳೇನು?